ಕೋಲಾರ ಜಿಲ್ಲೆಯಲ್ಲಿ ಪದೇ ಪದೇ ವಿದ್ಯುತ್ ಪೂರೈಕೆ ಆಗುತ್ತಿರುವ ಬಗ್ಗೆ

೧೬. ಶ್ರೀ ಜಿ. ಕೆ. ವೆಂಕಟಶಿವ ರೆಡ್ಡಿ (ಶ್ರೀನಿವಾಸಪುರ).—ಮಾನ್ಯ ಆಭ್ಯಾರಿ ಮತ್ತು ವಿದ್ಯುತ್ ಮಂತ್ರಿಗಳು ಈ ಕೆಳಗೆ ಕಂಡ ಪ್ರಶ್ನೆಗಳನ್ನು ಉತ್ತರಿಸುವರೇ ?

ಅ) ಕೋಲಾರ ಜಿಲ್ಲೆಯಲ್ಲಿ ಪದೇ ಪದೇ ವಿದ್ಯುಚ್ಛಕ್ತಿ ಪೂರೈಕೆ ಆಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ ;

ಆ) ಹಾಗಿದ್ದಲ್ಲಿ, ರೈತರು ವ್ಯವಸಾಯ ಕಸಬುಗಳಿಗೆ ನೀರೆತ್ತಲು ತೊಂದರೆಪಡುತ್ತಿರುವುದು ನಿಜವಲ್ಲವೆ.

ಇ) ಕೋಲಾರ ಜಿಲ್ಲೆಯನ್ನು ವಿದ್ಯುತ್ ಪೂರೈಕೆಯಿಂದ ವಿನಾಯಿತಿಗೊಳಿಸಲು ಸರ್ಕಾರ ಕೈಕೊಂಡಿರುವ ಅಥವಾ ಕೈಕೊಳ್ಳಬೇಕೆಂದಿರುವ ಕ್ರಮಗಳೇನು ?

ಶ್ರೀ ಜೆ. ಹೆಚ್. ಪಟೇಲ್ (ವಿದ್ಯುತ್ ಮತ್ತು ಆಬ್ಕಾರಿ ಮಂತ್ರಿಗಳು).—

ಅ) ಹೌದು

ಆ) ಕೆಲವೆ ತೊಂದರೆಗಳಿದ್ದರೂ ಇದನ್ನು ಪರಿಹಾರಗೊಳಿಸಲು ಸರ್ವಪ್ರಯತ್ನಗಳನ್ನು ಕೈಕೊಳ್ಳಲಾಗುತ್ತಿದೆ.

ಇ) ಕೋಲಾರ ಜಿಲ್ಲೆಯ ರೈತರು ಅನುಭವಿಸುತ್ತಿರುವ ಈ ತೊಂದರೆಯನ್ನು ಪರಿಹರಿಸಲು ಲೋಡ್ ಷೆಡ್ಡಿಂಗನ್ನು ದಿನಾಂಕ ೧೫-೧೧-೮೫ ರಿಂದ ಪ್ರತಿದಿನ ೬ ರಿಂದ ೧೦ ಗಂಟೆ ವರೆಗೆ ಆದೂ ದಿನ ಬಿಟ್ಟು ದಿನ, ಅಂದರೆ ದಿನ ಬಂದಕ್ಕೆ ನಾಲ್ಕು ಗಂಟೆ ಕಾಲ ಮಾತ್ರ ನಿಗಧಿಮಾಡಿದೆ. ಈ ಕ್ಲಪ್ತ ಕಾಲವನ್ನು ಬಿಟ್ಟು ಉಳಿದ ಕಾಲದಲ್ಲಿ ರೈತರು ವಿದ್ಯುತ್ ಬಳಸಿಕೊಳ್ಳಬಹುದು. ಆದರೆ ರಾಜ್ಯದ ಇತರೆ ಜಿಲ್ಲೆಗಳಲ್ಲಿ ಪ್ರತಿದಿನ ಆರು ಗಂಟೆಗಳ ಕಾಲ ಗ್ರಾಮೀಣ ಪೋಷಕ (ರೂರಲ್ ಫೀಡರ್ಸ್)ಗಳ ವಿದ್ಯುತ್‌ಪ್ರಸ್ತಾರನ್ನು ನಿಲ್ಲಿಸಲಾಗುತ್ತಿದೆ.

ಶ್ರೀ ಜಿ. ಹೆಚ್. ವೆಂಕಟಶಿವರೆಡ್ಡಿ.—ಮಾನ್ಯ ಅಧ್ಯಕ್ಷರೇ ನಮ್ಮ ಕರ್ನಾಟಕ ರಾಜ್ಯದಲ್ಲಿ ನೀರಾವರಿ ಪಂಪ್‌ಸೆಟ್‌ಗಳು ಕೋಲಾರ ಜಿಲ್ಲೆಯಲ್ಲಿಯೇ ಅತಿ ಹೆಚ್ಚಾಗಿವೆ. ಆದರೆ ಅಲ್ಲಿ ಸರಿಯಾಗಿ ವಿದ್ಯುತ್ ಸರಬರಾಜು ಆಗದೆ ರೈತರಿಗೆ ಬಹಳ ತೊಂದರೆಯಾಗಿದೆ ಮತ್ತು ಹೆಚ್ಚಿನ ವೋಲ್ಟೇಜ್ ಇಲ್ಲದೆ ಇರುವ ಕಾರಣ ಪಂಪ್‌ಸೆಟ್‌ಗಳೆಲ್ಲಾ ಸುಟ್ಟು ಹೋಗುವಂತಹ ಪರಿಸ್ಥಿತಿ ಬಂದಿದೆ. ಆದ್ದರಿಂದ ಬೆಳಿಗ್ಗೆ ೬ ಘಂಟೆಯಿಂದ ೧೦ ಘಂಟೆಯವರೆಗೆ ನಿಗದಿ ಮಾಡಿರುವುದನ್ನು ಬದಲಾವಣೆ ಮಾಡಿಕೊಟ್ಟರೆ ಒಳ್ಳೆಯದೆಂದು ನನಗನಿಸುತ್ತದೆ, ಈ ದಿಸೆಯಲ್ಲಿ ಸರ್ಕಾರ ಏನಾದರೂ ಕ್ರಮ ಕೈಗೊಳ್ಳುತ್ತಾರೆಯೇ ?

ಶ್ರೀ ಜೆ. ಹೆಚ್. ಪಟೇಲ್.—ಮಾನ್ಯ ಅಧ್ಯಕ್ಷರೇ ನಾನು ಈಗಾಗಲೇ ಹೇಳಿದ ಹಾಗೆ ಎಲ್ಲಾ ಜಿಲ್ಲೆಗಳಿಗೂ ವಿದ್ಯುತ್ ಕಡಿತ ಮಾಡಿದ ಹಾಗೆ ಕೋಲಾರ ಜಿಲ್ಲೆಯಲ್ಲಿಯು ಕಡಿತ ಮಾಡಲಾಗಿದೆ. ಆದರೆ ಇಲ್ಲಿ ಬೇರೆ ಕಡೆಗಿಂತ ಎರಡು ಗಂಟೆಗಳ ಕಾಲ ಮಾತ್ರ ಕಡಿಮೆ ಮಾಡಲಾಗಿದೆ. ಮತ್ತೆ ಅಲ್ಲಿ ವಿದ್ಯುತ್ ರೈತರಿಗೆ ಅತ್ಯಾವಶ್ಯಕವೆಂದು ಕಂಡುಬಂದರೆ ಈಗಿನ ಪದ್ಧತಿಯನ್ನು ಪುನರ್‌ಪರಿಶೀಲನೆ ಮಾಡೋಣ.

ಶ್ರೀ ಸಿ. ಬೈರೇಗೌಡ.—ಮಾನ್ಯ ಅಧ್ಯಕ್ಷರೇ ಕೋಲಾರ ಜಿಲ್ಲೆಯಲ್ಲಿ ಪ್ರಮುಖವಾದ ಬೆಳೆಯೆಂದರೆ ಅಲೂಗಡ್ಡೆ. ಈ ಬೆಳೆಗೆ ನೀರು ಸರಿಯಾಗಿ ಕಟ್ಟದಿದ್ದರೆ ಬೆಳೆ ಸರಿಯಾಗಿ ಆಗುವುದಿಲ್ಲ. ಮಾನ್ಯ ಮಂತ್ರಿಗಳು ಹೇಳಿದ ಹಾಗೆ ೬ ಗಂಟೆಯಿಂದ ೧೦ ಗಂಟೆಯವರೆಗೆ ವಿದ್ಯುತ್‌ಶಕ್ತಿಯನ್ನು ಕಡಿತ ಮಾಡಿದ್ದೇವೆಂದು ಹೇಳಿದ್ದಾರೆ. ಆದರೆ ಪ್ರತಿದಿನ ೬ ಗಂಟೆಯಿಂದ ೧೨ ಗಂಟೆಯವರೆಗೆ ವಿದ್ಯುಚ್ಛಕ್ತಿ ಇರುವುದಿಲ್ಲ. ಇದರಿಂದ ಬೆಳೆ ಸರಿಯಾಗಿ ಆಗದೆ ರೈತರಿಗೆ ತೊಂದರೆಯಾಗುತ್ತದೆ. ಕೋಟ್ಯಾಂತರ ರೂಪಾಯಿಗಳ ನಷ್ಟವಾಗುತ್ತದೆ. ಆದ್ದರಿಂದ ಪ್ರತಿದಿನ ಬೆಳಿಗ್ಗೆ ೬ ಗಂಟೆಯಿಂದ ೨ ಗಂಟೆಯವರೆಗೆ ವಿದ್ಯುಚ್ಛಕ್ತಿಯನ್ನು ಕೊಡುವ ವ್ಯವಸ್ಥೆಯಾನ್ನು ಮಾಡುತ್ತೀರಾ ?

ಶ್ರೀ ಜೆ. ಹೆಚ್. ಪಟೇಲ್.—ಈಗಾಗಲೇ ನಾನು ಹೇಳಿದ ಹಾಗೆ ಇಡೀ ರಾಜ್ಯದಲ್ಲಿಯೇ ವಿದ್ಯುತ್ ಕಡಿತ ಮಾಡಲಾಗಿದೆ. ಆದರೆ ರಾಜ್ಯದಲ್ಲಿ ವಿದ್ಯುಚ್ಛಕ್ತಿಯ ಕೊರತೆಯಿಂದಾಗಿ ತಾವು ಕೇಳಿದಷ್ಟು ವಿದ್ಯುತ್ ಕೊಡುವುದಕ್ಕೆ ಅನಾನುಕೂಲವಾಗಿದೆ. ರೈತರಿಗೆ ಹೆಚ್ಚಿನ ವಿದ್ಯುತ್ ಒದಗಿಸಿಕೊಡಬೇಕೆಂದು ಸರ್ಕಾರಕ್ಕೂ ಮನಸ್ಸು ಇದೆ. ಆದರೆ ವಾಸ್ತವಿಕವಾಗಿ ಕೊಡುವುದಕ್ಕೆ ಸಾಧ್ಯವಿಲ್ಲ. ಮಾನ್ಯ ಸದಸ್ಯರು ಹೇಳಿದ ಹಾಗೆ ನಾವು ಕೋಲಾರ ಜಿಲ್ಲೆಗೆ ಬೇರೆ ರೀತಿಯ ವ್ಯವಸ್ಥೆ ಗುಲ್ಬರ್ಗ ಜಿಲ್ಲೆಗೆ ಬೇರೆ ವ್ಯವಸ್ಥೆ ಮಾಡ ಬೇಕೆನ್ನುವ ಪ್ರಶ್ನೆಯಲ್ಲ. ಎಲ್ಲಿ ವಿದ್ಯುತ್ ಅವಶ್ಯಕವಿದೆ ಎಂಬುದನ್ನು ಮನಗಂಡು ನಾವು ನಿಮ್ಮ ಕೋಲಾರ ಜಿಲ್ಲೆಗೆ ೬ ಗಂಟೆಯಿಂದ ೧೦ ಗಂಟೆಯವರೆಗೆ ಅಂದರೆ ೪ ಗಂಟೆಗಳ ಕಾಲ ಮಾತ್ರ ಕಡಿತ ಮಾಡ ಲಾಗಿದೆ. ರೈತರಿಗೆ ಆಗಿರುವಂತಹ ಅನಾನುಕೂಲಕ್ಕೆ ಸಹಕರಿಸಬೇಕು.

ಶ್ರೀ ಜಿ. ಹೆಚ್. ವೆಂಕಟಶಿವರೆಡ್ಡಿ.—ನಮ್ಮ ಕೋಲಾರ ಜಿಲ್ಲೆಯಲ್ಲಿ ಎಲ್ಲಾ ತಾಲ್ಲೂಕುಗಳಲ್ಲಿಯೂ ಕೂಡ ವಿದ್ಯುಚ್ಛಕ್ತಿಯನ್ನು ಐ. ಪಿ. ಪಂಪ್‌ಸೆಟ್‌ಗಳಿಗೆ ಮಂಜೂರು ಮಾಡಿದ್ದಾರೆ. ಆದರೆ ಕಂಬಗಳು ಇಲ್ಲವೆಂದು ಹೇಳಿ ಅವರಿಗೆ ಸರ್ವಿಸ್ ಕೊಡುತ್ತಿಲ್ಲ. ಇದರಿಂದ ರೈತರಿಗೆ ಬಹಳ ತೊಂದರೆಯಾಗಿದೆ. ಇದಕ್ಕೆ ಸರ್ಕಾರ ಏನು ಕ್ರಮ ತೆಗೆದುಕೊಳ್ಳುತ್ತೀರಿ ?

ಶ್ರೀ ಜೆ. ಹೆಚ್. ಪಟೇಲ್.—ಅಂತಹ ಸಮಸ್ಯೆಗಳನ್ನು ನಿರ್ದಿಷ್ಟವಾಗಿ ನನ್ನ ಗಮನಕ್ಕೆ ತಂದರೆ ಅದರ ಬಗ್ಗೆ ನಾನು ಸೂಕ್ತ ಕ್ರಮ ತೆಗೆದುಕೊಳ್ಳುತ್ತೇನೆ.

ಶ್ರೀ ಎ. ಮುನಿಯಪ್ಪ.—ಮಾನ್ಯ ಅಧ್ಯಕ್ಷರೇ ನಮ್ಮ ಕೋಲಾರ ಜಿಲ್ಲೆಯಲ್ಲಿ ಸುಮಾರು ೮ ಕೋಟಿ ರೂಪಾಯಿಗಳಷ್ಟು ಅಲೂಗೆಡ್ಡೆಯ ಬೆಳೆ ಇದೆ. ಈ ಬೆಳೆಗೆ ಮಾರ್ಚ್, ಏಪ್ರಿಲ್, ಮತ್ತು ಮೇ ತಿಂಗಳ ವರೆಗೆ ಬೆಳೆಗ್ಗೆ ನೀರು ಹಾಯಿಸಬೇಕಾಗುತ್ತದೆ ಆದರೆ ತಾವು ಬೆಳಿಗ್ಗೆ ೬ ಗಂಟೆಯಿಂದ ೧೦ ಗಂಟೆಯವರೆಗೆ ವಿದ್ಯುತ್ ಕಡಿತ ಮಾಡಿದ್ದೀರಿ. ಇದರಿಂದ ಸುಮಾರು ೮ ಕೋಟಿ ರೂಪಾಯಿಗಳ ನಷ್ಟ ರೈತರಿಗೆ ಆಗುತ್ತದೆ. ಆದ್ದರಿಂದ ತಾವು ೬ ಗಂಟೆಯಿಂದ ೧೦ ಗಂಟೆಯವರೆಗೆ ವಿದ್ಯುತ್ ಕಡಿತ ಮಾಡಿರುವುದನ್ನು ಇನ್ನೂ ಸ್ವಲ್ಪ ಕಡಿಮೆ ಮಾಡುತ್ತೀರಾ ?

ಶ್ರೀ ಜೆ. ಹೆಚ್. ಪಟೇಲ್.—ಪ್ರತಿಯೊಬ್ಬ ರೈತರಿಗೂ ವಿದ್ಯುತ್ ಅವಶ್ಯಕವಾಗಿರುವುದರಿಂದ ನಾವು ಕೆಲವು ವೇಳೆಯನ್ನು ಕೆಲವು ಕಡೆ ನಿಗದಿ ಮಾಡಿ ಅಂದರೆ ೬–೧೦ ಗಂಟೆಯವರೆಗೆ ಮತ್ತೆ ಕೆಲವು ಕಡೆ ೬ ಗಂಟೆಯಿಂದ ೧೨ ಗಂಟೆಯವರೆಗೆ ನಿಗದಿ ಮಾಡಿದ್ದೇವೆ. ಈ ರೀತಿ ಒಂದು ಸೈಕಲ್ ಸಿಸ್ಟಂ ಮಾಡಿ ದ್ದೇವೆ. ಈ ಸಿಸ್ಟಂನ್ನು ತಜ್ಞರಿಂದ ಮತ್ತು ತಂತ್ರಜ್ಞರಿಂದ ಪರೀಕ್ಷಿಸಿ ಪಾಸ್‌ಕೊಂಡಿದ್ದೇವೆ.

(ಪ್ರಶ್ನೆ ಸಂಖ್ಯೆ ೧೭ ಮತ್ತು ೧೮)

ಅಧ್ಯಕ್ಷರು.—ಸರಿಯಾದ ಮಾಹಿತಿ ಬಂದಿಲ್ಲವಾದ್ದರಿಂದ, ಈ ಪ್ರಶ್ನೆಗಳನ್ನು ತಡೆಹಿಡಿಯಲಾಗಿದೆ.

ಗ್ರಾಮಾಂತರ ಸಹಕಾರ ಸಂಘಗಳು

ಸಂಖ್ಯೆ : ೧೯

ಶ್ರೀ ಬಿ.ಜಿ. ಬಣಕಾರ್ (ಹಿರೇಕೆರೂರು).—ಮಾನ್ಯ ಸಹಕಾರಿ ಮಂತ್ರಿಗಳು ಈ ಕೆಳಗೆ ಕಂಡ ಪ್ರಶ್ನೆ ಗಳನ್ನು ಉತ್ತರಿಸುವರೇ?

ಅ) ಗ್ರಾಮಾಂತರ ಪತ್ತಿನ ಸಹಕಾರ ಸಂಘಗಳು ತೃಪ್ತಿಕರವಾಗಿ ಕೆಲಸ ಮಾಡದೆ ನಷ್ಟ ಹೊಂದಿರು ವುದಕ್ಕೆ ಕಾರಣಗಳು :

ಆ) ಗ್ರಾಮಾಂತರ ಪತ್ತಿನ ಸಹಕಾರ ಸಂಘಗಳ ಕಾರ್ಯದರ್ಶಿಗಳನ್ನು ಸರ್ಕಾರಿ ನೌಕರರೆಂದು ಪರಿಗಣಿಸಲು ಸರ್ಕಾರ ಸೂಕ್ತ ಕ್ರಮ ತೆಗೆದುಕೊಳ್ಳುತ್ತಾರೆಯೇ?

ಇ) ಈ ಸಹಕಾರ ಸಂಘಗಳು ಪ್ರತಿ ಪಂಚಾಯತಿಗೊಂದು ಇರಬೇಕೇ? ಅಥವಾ ಪ್ರತಿ ಹಳ್ಳಿಗೊಂದು ಇರಬೇಕೇ? ಹೇಗೆಂಬುವ ಬಗ್ಗೆ ಸರ್ಕಾರದ ನಿಲುವೇನು?

ಗ್ರಾಮಾಂತರ ಸಹಕಾರ ಸಂಘಗಳು ಸಮರ್ಥ ರೀತಿಯಲ್ಲಿ ಕಾರ್ಯ ಮಾಡಿ ಹಳ್ಳಿಗರಿಗೆ ಅನು ಕೂಲವಂತಾಗಲು ಸರ್ಕಾರ ಯಾವ ಕ್ರಮ ತೆಗೆದುಕೊಳ್ಳಲಾಗಿದೆ?